ಶ್ರೀ ಜ್ಞಾನದೇವ ದೊಡ್ಡಮೇಟಿ —ಸ್ವಾಮಿ, ಗಜೇಂದ್ರಗಡದಲ್ಲಿ ಪಶುವೈದ್ಯ ಕೇಂದ್ರದ ಕಟ್ಟಡ ಇದೆ. ಅದು ಲೋಕೋಪಯೋಗಿ ಕಛೇರಿಯಲ್ಲಿದೆಯೋ, ನಗರಸಭೆಯ ಕಛೇರಿಯಲ್ಲಿದೆಯೋ ಗೊತ್ತಿಲ್ಲ; ಅನಾಥ ಕಟ್ಟಡದ ಸುರಕ್ಷಣೆಯನ್ನು ಯಾರು ಮಾಡಬೇಕು ?

ಶ್ರೀ ಅಬ್ದುಲ್ ನಜೀರ್ ಸಾಬ್ — ಸ್ವಾಮಿ, ಈ ವಿಚಾರದಲ್ಲಿ ನಾನು ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎನ್.ಆರ್.ಇ.ಪಿ. ಯೋಜನೆಯಲ್ಲಿ ಪಶುವೈದ್ಯ ಕೇಂದ್ರಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಕಾರಣ 15,000ಕ್ಕೆ ಮೇಲ್ಪಟ್ಟು ಹಣ ಸಿಗುವುದಿಲ್ಲ. ಮಾನ್ಯ ಸದಸ್ಯರ ತಾಲ್ಲೂಕು ಡಿ.ಪಿ.ಎ.ಪಿ. ಯೋಜನೆಯಲ್ಲಿ ಬರುತ್ತದೆ; ಹಾಲಿನ ಮಂಡಲಿಯವರು ಸ್ವಲ್ಪ ಕಾಂಟ್ರಿಬ್ಯೂಷನ್ ಕೊಟ್ಟರೆ ಒಂದು ಲಕ್ಷ ರೂಪಾಯಿ ಕಟ್ಟಡ ಕಟ್ಟಬಹುದು.

ಶ್ರೀ ಎ. ಬಿ. ಶಾನಪ್ಪ —ಗ್ರಾಮಾಂತರ ಪ್ರದೇಶಗಳಲ್ಲಿ ಪಶುವೈದ್ಯ ಕೇಂದ್ರಗಳನ್ನು ಕಟ್ಟಬೇಕಾದರೆ; ಜಮೀನು ಕೊಡಬೇಕು; ಮತ್ತೊಂದು ಕೊಡಬೇಕೆಂದು ಹೇಳುತ್ತಾರೆ; ಗ್ರಾಮೀಣ ಮಂತ್ರಿಯವರೇ ಕಟ್ಟಡ ಕಟ್ಟಿಸಿಕೊಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಅಬ್ದುಲ್ ನಜೀರ್ ಸಾಬ್ — ಆಗುವುದಿಲ್ಲ.

ಅಧ್ಯಕ್ಷರು.— ಪ್ರಶ್ನೆ 214 ಶ್ರೀ ಟಿ.ಪಿ. ಬೋರಯ್ಯ,—ಸದಸ್ಯರಿಲ್ಲ. ಮುಂದಿನ ಪ್ರಶ್ನೆ ಶ್ರೀ ವಸಂತ ಬಂಗೇರಾ

ವಿಷಯ : ಕಬಿನಿ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆ ಬೆಳೆಯುವ ಯೋಜನೆ

ಪ್ರಶ್ನೆ : 204 (490) ಟಿ.ಪಿ. ಬೋರಯ್ಯ (ಬನ್ನೂರು). — ಮೊನ್ನೆ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕಬಿನಿ ನಾಲಾ ಅಚ್ಚುಕಟ್ಟಿನಲ್ಲಿ ಸರಕಾರದವರೇ ಬೆಳೆಯುವ ಕಾರ್ಯಕ್ರಮ ಇದೆಯೇ ;

ಆ) ಹಾಗಿದ್ದಲ್ಲಿ ಅಲ್ಲಿ ಬೆಳೆಯುವ ಬೆಳೆಗಳ ವಿವರಗಳನ್ನು ಹಾಗೂ ಬೆಳೆಯುವ ಬೆಳೆಗಳ ಉತ್ಪನ್ನಗಳನ್ನು ಸಂಸ್ಕರಿಸುವ ಘಟಕಗಳನ್ನು ಸರಕಾರದ ವತಿಯಿಂದ ಸ್ಥಾಪಿಸಲು ಹಾಕಿಕೊಂಡಿರುವ ಕಾರ್ಯಕ್ರಮಗಳೇನು ?

ಉತ್ತರ : ಶ್ರೀ ಬಿ.ಎಲ್. ಗೌಡ (ಕೃಷಿ ಸಚಿವರು).— ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಮಾನ್ಯ ಸದಸ್ಯರು ಹಾಜರಿರಲಿಲ್ಲ

ವಿಷಯ : ಸರಕಾರಿ ಕಛೇರಿಗಳಿಗೆ ಲೇಖನ ಸಾಮಗ್ರಿಗಳ ಸರಬರಾಜು

ಪ್ರಶ್ನೆ : 215 (801) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ). — ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದ ಆರಕ್ಷಕ ಠಾಣೆ ಖಜಾನೆ, ತಾಲ್ಲೂಕು ಕಛೇರಿಗಳೇ ಮುಂತಾದ ಸರ್ಕಾರಿ ಕಛೇರಿಗಳಿಗೆ ಲೇಖನ ಸಾಮಗ್ರಿ ಪುಸ್ತಕ ನಮೂನೆಗಳ ಸರಬರಾಜು ಸಾಕಷ್ಟು ಪ್ರಮಾಣದಲ್ಲಿ ಆಗುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮವೇನು ?

ಉತ್ತರ : ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).— ಅ) ರಾಜ್ಯದ ಹಲವು ಸರ್ಕಾರಿ ಕಛೇರಿಗಳಿಗೆ ವಿದ್ಯುಚ್ಛಕ್ತಿ ಅಡಚಣೆ, ಕಾಗದ ಇತ್ಯಾದಿ ಸಾಮಗ್ರಿಗಳ ಅಭಾವ, ಮುದ್ರಣಾಲಯಗಳಲ್ಲಿಯ ಕಾರ್ಮಿಕ ಅಶಿಸ್ತು, ಈ ಕಾರಣಗಳಿಂದಾಗಿ ಹಲವೊಮ್ಮೆ ಅವರು ಕೋರಿದಷ್ಟು ಫಾರ್ಮುಗಳ ಬೇಡಿಕೆಗಳನ್ನು ಪೂರ್ತಿಯಾಗಿ ಒದಗಿಸಲು ಸಾಧ್ಯವಾಗಲಿಲ್ಲ. ಇನ್ನು ಕೆಲವು ಸಂದರ್ಭಗಳಲ್ಲಿ ಅತಿಹೆಚ್ಚು ಬೇಡಿಕೆಗಳನ್ನು ಹೂಡಿರುವುದರ ಪ್ರಯುಕ್ತ ಅಷ್ಟು ಬೇಡಿಕೆಗಳನ್ನು ಪೂರೈಸಲಾಗಲಿಲ್ಲ.

ಲೇಖನ ಸಾಮಗ್ರಿಗಳ ಬಗ್ಗೆ ಸಹ ಆಗಸ್ಟ್ 1983 ರಿಂದ ಲೇಖನ ಸಾಮಗ್ರಿಗಳ ಕೊಳ್ಳುವಿಕೆಯಲ್ಲಿ ನೂರಕ್ಕೆ ನೂರರಷ್ಟು ಕಡಿತ ಮಾಡಿ ಹೊರಡಿಸಿದ ಸರ್ಕಾರದ ವಿತವ್ಯಯದ ಆಜ್ಞೆಯ ದೆಸೆಯಿಂದ ಹಲವು ರೀತಿಯ ಸಾಮಗ್ರಿಗಳನ್ನು ಸರಬರಾಜು ಮಾಡಲು ಸಾಧ್ಯವಾಗಿಲ್ಲ. ಆದಾಗ್ಯೂ ಇತ್ತೀಚೆಗೆ ಸದರಿ ಸಾಮಗ್ರಿಗಳ ಕೋರಿಕೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಅರ್ಹತೆ ಇರುವಷ್ಟು ಪೂರೈಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಇಂತಹ ಸಂದರ್ಭಗಳಲ್ಲಿ ಜರೂರು ಅವಶ್ಯಕತೆಯನ್ನು ಗಮನದಲ್ಲಿಟ್ಟು, ಅಂತಹ ಫಾರ್ಮುಗಳ ಮುದ್ರಣಕ್ಕೆ ಸರ್ಕಾರಿ ಮುದ್ರಣಾಲಯಗಳಲ್ಲಿ, ಸರ್ಕಾರಿ ಸ್ವಾಮ್ಯದಲ್ಲಿರುವ ಲೋಕ ಶಿಕ್ಷಣ ಟ್ರಸ್ಟ್ ಇಂತಹ ಸಂಸ್ಥೆಗಳ ಮುದ್ರಣಾಲಯಗಳಲ್ಲಿ ಮತ್ತು ಹಲವು ಬಾರಿ ಖಾಸಗಿ ಮುದ್ರಣಾಲಯಗಳಲ್ಲಿ ಸಹ ಮುದ್ರಣಕ್ಕೆ ವಿಶೇಷ ವ್ಯವಸ್ಥೆ ಮಾಡಿ ಸರಬರಾಜು ಮಾಡುವ ಏರ್ಪಾಡು ಮಾಡಲಾಗಿದೆ. ಕೆಲವು ಬಾರಿ ಮುದ್ರಣ ಸಾಮಗ್ರಿಗಳು ಮತ್ತು ಇನ್ನು ಇತರ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು ತೊಂದರೆ ಇದ್ದಾಗ, ಜರೂರಾಗಿ ಸ್ಥಳೀಯವಾಗಿ ಈ ವಸ್ತುಗಳನ್ನು ಕೊಳ್ಳಲು ಸ್ಥಳೀಯ ಅಧಿಕಾರಿಗಳಿಗೆ ಪರವಾನಿಗೆಯನ್ನು ಸಹ ಕೊಡಲಾಗಿದೆ,

ಶ್ರೀ ಕೆ. ವಸಂತ ಬಂಗೇರಾ — ಮಾನ್ಯ ಅಧ್ಯಕ್ಷರೇ, ಸರ್ಕಾರದವರೇ, ಸಾಮಗ್ರಿಗಳನ್ನು ಸರಿಯಾಗಿ ಪೂರೈಕೆ ಮಾಡದಿದ್ದರೆ ಅಲ್ಲಿ ಅಧಿಕಾರಿಗಳು ಸಾಮಾನ್ಯ ಜನರಿಂದ ತರಲಿಕ್ಕೆ ಒತ್ತಾಯ ಮಾಡುತ್ತಿದ್ದಾರೆ. ಈ ರೀತಿ ಅವ್ಯವಸ್ಥೆ ಇರುವುದರಿಂದ ಸರ್ಕಾರವೇ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಟ್ಟಂತೆ ಆಗುವುದಿಲ್ಲವ ? ಆದುದರಿಂದ ಅಲ್ಲಿ ಬೇಕಾದ ಸಾಮಗ್ರಿಗಳನ್ನು ಸರ್ಕಾರದವರು ಕೂಡಲೇ ಪೂರೈಕೆ ಮಾಡುತ್ತಾರೆಯೇ ?

ಶ್ರೀ ಬಿ. ರಾಚಯ್ಯ.— ನಮಗೆ ಕಾಗದ ಕೇಂದ್ರ ಸರ್ಕಾರದಿಂದ ಬರಬೇಕಾಗಿದೆ. ನಮಗೆ ಸಾಕಷ್ಟು ಬಾರದೇ ಇರುವುದರಿಂದ ಮುದ್ರಣ ಕಾರ್ಯಗಳಿಗೆ ಬೇಕಾಗುವ ವಸ್ತುಗಳನ್ನು ಹೊರಗಡೆಯಿಂದ ಸರ್ಕಾರೀ ದರದಲ್ಲಿ ಕೊಂಡುಕೊಳ್ಳಬಹುದೆಂದು ತಿಳಿಸಿದ್ದೇವೆ. ಇದಕ್ಕಿಂತ ಹೆಚ್ಚಿನ ದರವನ್ನು ಕೊಟ್ಟು ಕೊಂಡು ಕೊಳ್ಳುವ ಹಾಗಿಲ್ಲ.

ಶ್ರೀ ಡಾ॥ ವಿ. ವಿಸ್. ಆಚಾರ್ಯ.— ನಾವು ಪೋಲೀಸ್ ಸ್ಟೇಷನ್‌ಗೆ ಗಂಭೀರವಾದ ದೂರನ್ನು ಕೊಡುವುದಕ್ಕೆ ಹೋದರೆ ಒಂದು ರೀಮ್ ಕಾಗದ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ.

ಶ್ರೀ ಬಿ ರಾಚಯ್ಯ.— ಮುದ್ರಣಕ್ಕೆ ಸಂಬಂಧಪಟ್ಟ ಹಾಗೆ ಎಷ್ಟೆಷ್ಟು ಒದಗಿಸುವುದಕ್ಕೆ ಸಾಧ್ಯವೋ ಅಷ್ಟನ್ನು ಒದಗಿಸಿದ್ದೇವೆ. ಹೆಚ್ಚಿಗೆ ಬೇಕಾದಲ್ಲಿ ಲೋಕಲ್ ಆಗಿ ತೆಗೆದು ಕೊಳ್ಳುವುದಕ್ಕೂ ಅವಕಾಶ ಮಾಡಿಕೊಟ್ಟಿದ್ದೇವೆ.

ವಿಷಯ : ಕೊಡಗುಜಿಲ್ಲೆಯಲ್ಲಿ ಬೆಳೆವಿಮೆ ಯೋಜನೆ ಕುರಿತು

ಪ್ರಶ್ನೆ :— 216(525) ಶ್ರೀ ಎಂ. ಎಂ ನಾಣಯ್ಯ (ಕೊಡಗು).— ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕೊಡಗು ಜಿಲ್ಲೆಯಲ್ಲಿ ಬೆಳೆ ವಿಮೆ ಜಾರಿಯಲ್ಲಿದೆಯೇ ;

ಆ) ಹಾಗಿದ್ದರೆ ಪಾಲಿಸಿದಾರರು ಎಷ್ಟು ಮತ್ತು ಇದುವರೆಗೂ ಎಷ್ಟು ಹಣ ವಿಮೆ ಮಾಡಿಸಿದೆ ;

ಇ) ಹಾಗಿಲ್ಲದಿದ್ದರೆ ಈ ಯೋಜನೆಯು ಮೇಲ್ಕಂಡ ಜಿಲ್ಲೆಯಲ್ಲಿ ಕಾರ್ಯಗತವಾಗದಿರಲು ಕಾರಣಗಳೇನು ;

ಈ) ಕೊಡಗು ಮಲೆನಾಡು ಪ್ರದೇಶವಾದ್ದರಿಂದ ಈ ಯೋಜನೆಯನ್ನು ಬದಲಾವಣೆ ಮಾಡಿ ಸರಳಗೊಳಿಸಲು ಸರ್ಕಾರವು ಉದ್ದೇಶಿಸಿದೆಯೇ ?

ಉತ್ತರ : ಶ್ರೀ ಬಿ. ಎಲ್. ಗೌಡ (ಕೃಷಿ ಸಚಿವರು).— ಅ) ಸರ್ಕಾರವು ಬೆಳೆ ವಿಮೆ ಯೋಜನೆಯನ್ನು ಕೊಡಗು ಜಿಲ್ಲೆಯಲ್ಲಿ ಜಾರಿಗೆ ತಂದಿದೆ. ಆದರೆ ರೈತರು ಮೇಲ್ಕಂಡ ಯೋಜನೆಯಲ್ಲಿ ಪಾಲುಗೊಳ್ಳುತ್ತಿಲ್ಲ.

ಆ) ಮೇಲ್ಕಂಡ (ಅ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಯೋಜನೆಯು ಸ್ವಪ್ರೇರಣೆಯಾದದ್ದು ಮತ್ತು ಡಿ.ಸಿ.ಸಿ. ಬ್ಯಾಂಕಿನಲ್ಲಿ ಬೆಳೆ ಸಾಲ ತೆಗೆದು ಕೊಳ್ಳದವರಿಗೆ ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಅವಕಾಶವಿಲ್ಲ. ಈ ಜಿಲ್ಲೆಯು ಆಯ್ದ ತಾಲ್ಲೂಕುಗಳಲ್ಲಿ ಬೆಳೆ ವಿಮಾ ಕಂಪನಿಯವರು ನಿಗದಿಪಡಿಸಿರುವ ತಾಲ್ಲೂಕು ಮಟ್ಟದ ಸರಾಸರಿ ಖಾತರಿ ಇಳುವರಿಯು ಸಾಮಾನ್ಯ ಇಳುವರಿಗಿಂತ ಬಹಳಷ್ಟು ಕಡಿಮೆ ಇದ್ದು ಹಾಗೂ ವಿಮೆ ಪರಿಹಾರ ಕೊಡುವಾಗ ತಾಲ್ಲೂಕು ಮಟ್ಟದ ಸರಾಸರಿ ಇಳುವರಿಯನ್ನು ಗಣನೆಗೆ ತೆಗೆದುಕೊಳ್ಳುವುದರಿಂದ, ವೈಯಕ್ತಿಕವಾಗಿ ಬೆಳೆ ನಷ್ಟವಾದ ರೈತರಿಗೆ ವಿಮೆ ಪರಿಹಾರ ಸಿಕ್ಕುವ ಸಾಧ್ಯತೆ ಕಡಿಮೆ ಆಲ್ಲದೆ ಈ ಜಿಲ್ಲೆಯು ಮಲೆನಾಡಾದ್ದರಿಂದ, ರೈತರು ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಮುಂದೆ ಬರುತ್ತಿಲ್ಲ.

ಈ) ಈ ಯೋಜನೆಯು ರಾಷ್ಟ್ರೀಯ ವ್ಯಾಪ್ತಿಯಾದುದರಿಂದ, ಜ.ಐ.ಸಿ. ಕಂಪೆನಿಯವರು ಆಯಾ ಜಿಲ್ಲೆಗಳಿಗೆ ತಕ್ಕಂತೆ ಬದಲಾವಣೆ ಮಾಡಲು ಒಪ್ಪಿರುವುದಿಲ್ಲ. ಆದರೂ ಕೂಡ ರಾಜ್ಯಸರ್ಕಾರವು, ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಈ ಯೋಜನೆಯನ್ನು ಮಲೆನಾಡು ಪ್ರದೇಶಗಳಿಗೆ ಸೂಕ್ತವಾಗಿರುವಂತೆ ಸಡಿಲಗೊಳಿಸಬೇಕೆಂದು ಕೇಳಿಕೊಳ್ಳಲಾಗಿದೆ.

ಶ್ರೀ ಎಂ. ಎಂ. ನಾಣಯ್ಯ.— ಅಧ್ಯಕ್ಷರೇ, ಮಾನ್ಯ ಮಂತ್ರಿಗಳವರ ಉತ್ತರ ಬಹಳ ಸಮಂಜಸವಾಗಿದೆ. ಆದರಲ್ಲಿ ಯಾವ ವಿವಾದವೂ ಇಲ್ಲ. ಆದರೆ ಇದರಲ್ಲಿ ಒಂದು ಸ್ಪಷ್ಟೀಕರಣವನ್ನು ಪಡೆಯಬೇಕಾಗಿದೆ. ಮಲೆನಾಡು ಪ್ರದೇಶ ಬೆಳೆ ವಿಮೆ ಪಡೆಯಲು ಯಾವ ರೀತಿಯಾಗಿ ಸೂಕ್ತವಾಗಿರಬೇಕು ಮತ್ತು ಕೇಂದ್ರಕ್ಕೆ ಯಾವಾಗ ಪತ್ರ ಬರೆದಿದ್ದೀರಿ ಎನ್ನುವುದನ್ನು ತಿಳಿಸುವುದಕ್ಕೆ ಸಾಧ್ಯವೇ ?

ಶ್ರೀ ಬಿ.ಎಲ್. ಗೌಡ.— ಅಧ್ಯಕ್ಷರೇ. ಈ ಬೆಳೆ ವಿಮೆ ಯೋಜನೆಯಲ್ಲಿ ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರಿಬ್ಬರೂ ಸೇರಿ ಪಾಲುದಾರರಾಗಿದ್ದೇವೆ. ಇದರಲ್ಲಿ 75 ಪರ್ಸೆಂಟ್ ಭಾಗ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದು, ಇನ್ನು 25 ಭಾಗ ರಾಜ್ಯ ಸರ್ಕಾರ ಮಾಡಿಕೊಳ್ಳುತ್ತದೆ. ಈ ಯೋಜನೆಯನ್ನು 10 ವರ್ಷಗಳ ಹಿಂದಿನ ಬೆಳೆಯನ್ನು ಆಧರಿಸಿ ಈ ವರ್ಷ ಬೆಳೆ ಕಡಿಮೆಯಾದರೆ ಅದರ ರಿಸ್ಕನ್ನು ಒಪ್ಪಿಕೊಳ್ಳುತ್ತಾರೆ. ಅಂಥಹ ಪರಿಸ್ಥಿತಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ ಬಂದಿಲ್ಲ. 1981ನೇ ಇಸವಿಯಲ್ಲಿ ಒಂದು ಸಾರಿ ಕೋಲಾರ ಜಿಲ್ಲೆಯಲ್ಲಿ ಮಾತ್ರ 1 ಲಕ್ಷದ 86 ಸಾವಿರ ರೂಪಾಯಿ